**<u>ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ. ದಂಡಾಧಿಕಾರಿಗಳ ನ್ಯಾಯಾಲಯ, ಗೋಕಾಕ</u>**

**<u>ಸಿ.ಸಿ. ನಂ. 76/2021</u>**

**ಪಿರ್ಯಾದುದಾರರುಃ** ವಿಜಯ ನಿಂಗವ್ವ ಕಲ್ಲಿಮನಿ,
45 ವರ್ಷ, ವೃತಿಃ ಮೆಕ್ಯಾನಿಕ್,
ಸಾಃ ಆದಿಜಾಂಬವ ನಗರ, ಗೋಕಾಕ,
ತಾಃ ಗೋಕಾಕ.

**- ವಿರುದ್ಧ -**

**ಆರೋಪಿ** ಆಸೀಫ್ ಎ ಸೌದಗರ,
38 ವರ್ಷ, ವೃತಿಃ ಖಾಸಗಿ ಉದ್ಯೋಗ,
ಸಾಃ ಕವಳಿಕಟ್ಟಿ (ಬಾಲಾಜಿ ಟ್ರಾನ್ಸಪೋರ್ಟ್ ಮುಧೋಳ ಕ್ರಾಸ್ ),
ಯಾದವಾಡ ತಾಃ ಮೂಡಲಗಿ.

**<u>ಆಪಾದನೆ</u>**

**ಶ್ರೀ ರಾಜೀವ ಗೋಳಸಾರ, ಬಿ.ಎ., ಎಲ್.ಎಲ್.ಎಂ., ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂಡಾಧಿಕಾರಿ, ಗೋಕಾಕ,** ಆದ ನಾನು, ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡಂತೆ ಆಪಾದನೆ ಮಾಡುತ್ತಿದ್ದೇನೆಃ

ಪಿರ್ಯಾದಿದಾರರು ಮತ್ತು ಆರೋಪಿಯಾದ ನೀವು ಸುಮಾರು 3-4 ವರ್ಷಗಳಿಂದ ಒಳ್ಳೆಯ ಪರಿಚಯಸ್ಥರಿರುತ್ತೀರಿ ಮತ್ತು ಒಳ್ಳೆಯ ಸ್ನೇಹ ಸಂಬಂಧದಿಂದರುತ್ತೀರಿ, ಹೀಗಿರುವಾಗ ಆರೋಪಿಯಾದ ನೀವು ಕೌಟುಂಬಿಕ ಕಾನೂನುಬದ್ಧ ಅವಶ್ಯಕತೆಗಳಿಗಾಗಿ ಮತ್ತು ಕೈಗಡ ಸಾಲವನ್ನು ತೀರಿಸುವ ಸಲುವಾಗಿ ದಿನಾಂಕ 16-01-2019 ರಂದು ಪಿರ್ಯಾದುದಾರರಿಗೆ ರೂ.1,50,000/- ಕೈಗಡ ಸಾಲವನ್ನು ಕೇಳಿದ್ದು, ಅದಕ್ಕೆ ಪಿರ್ಯಾದುದಾರರು ರೂ.1,50,000/-ಗಳನ್ನು ಆರೋಪಿಯಾದ ನಿಮಗೆ ನೀಡಿರುತ್ತಾರೆ. ನೀವು ಸದರಿ ಹಣವನ್ನು 04 ತಿಂಗಳ ಒಳಗಾಗಿ ಮರಳಿ ಕೊಡುತ್ತೇನೆಂದು ತಿಳಿಸಿರುತ್ತಿರಿ.

ಸದರಿ 04 ತಿಂಗಳು ಮುಗಿದಾದ ನಂತರ ಪಿರ್ಯಾದುದಾರರು ಆರೋಪಿಯಾದ ನಿಮಗೆ ಸದರಿ ಸಾಲದ ಹಣವನ್ನು ಮರು ಪಾವತಿ ಮಾಡುವಂತೆ ಕೇಳಿದಾಗ, ಆರೋಪಿಯಾದ ನೀವು ಒಂದಿಲ್ಲಾ ಒಂದು ಕಾರಣಗಳನ್ನು ಹೇಳುತ್ತಾ ಮುಂದೂಡುತ್ತಾ ಬಂದಿರುತ್ತೀರಿ, ಹೀಗಾಗಿ ಕೊನೆಗೆ ಪಿರ್ಯಾದುದಾರರು ಸಾಲದ ಹಣವನ್ನು ಮರುಪಾವತಿ ಮಾಡುವಂತೆ ಕೇಳಿದಾಗ ನೀವು ದಿಃ25-12-2019 ರಂದು ನಿಮ್ಮ ಐ ಡಿ ಎಫ್ ಸಿ ಬ್ಯಾಂಕ್ ಗೋಕಾಕ ಶಾಖೆ ಇಲ್ಲಿಗೆ ಸೇರಿದ ಚೆಕ್ ನಂ.000003 ನೇದ್ದನ್ನು ರೂ.1,50,000/- ಎಂದು ನಮೂದು ಮಾಡಿ ಪಿರ್ಯಾದುದಾರರಿಗೆ ನೀಡಿರುತ್ತಿರಿ.

ಆರೋಪಿಯಾದ ನೀವು ನೀಡಿದ ಚೆಕ್ಕನ್ನು ಪಿರ್ಯಾದುದಾರರು ತಮ್ಮ ಖಾತೆಯಿರುವ ಹೆಚ್ ಡಿ ಎಫ್ ಸಿ ಬ್ಯಾಂಕ್ , ಗೋಕಾಕ ಶಾಖೆ ಇಲ್ಲಿಗೆ ನಗದೀಕರಣಕ್ಕೆ ಹಾಜರುಪಡಿಸಿದಾಗ, ಆರೋಪಿಯಾದ ನಿಮ್ಮ ಖಾತೆಯಲ್ಲಿ ಸಾಕಷ್ಟು "ಹಣ ಇರುವುದಿಲ್ಲ" (FUNDS INSUFFICIENT) ಎಂಬ ಹಿಂಬರಹ ಹಾಗೂ ಮೆಮೋದೊಂದಿಗೆ ದಿನಾಂಕ 31-12-2019 ರಂದು ಸದರಿ ಚೆಕ್ ಅಮಾನ್ಯಗೊಂಡಿರುತ್ತದೆ.

ನಂತರ ಪಿರ್ಯಾದುದಾರರು ಆರೋಪಿಯಾದ ನೀವು ನೀಡಿದ ಚೆಕ್ಕು ಅಮಾನ್ಯಗೊಂಡ ಬಗ್ಗೆ ತಮ್ಮ ವಕೀಲರ ಮುಖಾಂತರ ದಿನಾಂಕ 07-01-2020 ರಂದು ತಿಳುವಳಿಕೆ ಪತ್ರವನ್ನು ಆರೋಪಿಯಾದ ನಿಮಗೆ ನೋಂದಾಯಿತ ಅಂಚೆ ಮೂಲಕ ಕಳುಹಿಸಿದ್ದರೂ, ಸದರಿ ನೋಟಿಸು ದಿನಾಂಕ 11-01-2020 ರಂದು ಜಾರಿಯಾಗಿದ್ದರೂ ಸಹ ಆರೋಪಿಯಾದ ನೀವು ನಿಗದಿತ ಸಮಯದಲ್ಲಿ ಚೆಕ್ಕಿನ ಹಣವನ್ನು ಮರುಸಂದಾಯ ಮಾಡದೆ ಇರುವ ಕಾರಣ ನೀವು ವರ್ಗಾವಣೀಯ ಲಿಖಿತಗಳ ಅಧಿನಿಯಮದ ಕಲಂ.138 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಆಪಾದಿಸಲಾಗಿರುತ್ತದೆ.

## ಆರೋಪಿಯ ಹೇಳಿಕೆ

ಪ್ರಶ್ನೆ ನಂ.1. ಈಗ ಓದಿ ಹೇಳಿದ ಆಪಾದನೆಯನ್ನು ಕೇಳಿಸಿಕೊಂಡಿರಾ ? ತಿಳಿಯಿತೇ ?

ಉತ್ತರಃ

ಪ್ರಶ್ನೆ ನಂ.2. ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ? ಅಥವಾ ವಿಚಾರಣೆಯಾಗಬೇಕಾ ?

ಉತ್ತರಃ

ಮೇಲಿನ ಆಪಾದನೆಯನ್ನು ಆರೋಪಿಗೆ ಕನ್ನಡ ಭಾಷೆಯಲ್ಲಿ ಓದಿ ಹೇಳಿ, ಆರೋಪಿಯು ಕೊಟ್ಟ ಉತ್ತರವು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನೊಳಗೊಂಡಿದೆ ಎಂದು ಈ ದಿನ ಅಂದರೆ ದಿನಾಂಕ 09-10-2023 ರಂದು ತೆರೆದ ನ್ಯಾಯಾಲಯದಲ್ಲಿ ದೃಢೀಕರಿಸುತ್ತೇನೆ.

**(ರಾಜೀವ ಗೋಳಸಾರ)**
**ಪ್ರಧಾನ ಪ್ರ.ದ.ನ್ಯಾ. ದಂ, ಗೋಕಾಕ.**